ಅ) ಇದೆ.

ಆ) ಕಾನೂನಿನ ಔಪಚಾರಿಕ ಕಾರ್ಯಗಳು ಮುಗಿದ ಕೂಡಲೇ ಸಾಧ್ಯವಾದಷ್ಟು ಬೇಗ.

ಸರ್ಕಾರಿ ಕೆಲಸದಲ್ಲಿ ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸಲು ತೆಗೆದುಕೊಂಡ ಕಾರ್ಯಕ್ರಮದ ಬಗ್ಗೆ

265 - ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಕೆಲಸದ ನೇಮಕಾತಿಯಲ್ಲಿ ಪ್ರಾದೇಶಿಕ ಅಸಮಾನತೆಯನ್ನು ಕಂಡು ಹಿಡಿಯಲು ಯಾವ ಸಮಿತಿಯನ್ನು ನೇಮಿಸಲಾಗಿದೆ?

ಆ) ನೇಮಕಾತಿಯಲ್ಲಿ ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಲು ಸರ್ಕಾರದ ನಿರ್ದಿಷ್ಟ ಕಾರ್ಯಕ್ರಮವೇನು?

ಇ) ಪ್ರಾದೇಶಿಕ ಅಸಮಾನತೆಯಿಂದ ಉದ್ಭವಾಗಿರುವ ಸಮಸ್ಯೆಗೆ ರಾಜ್ಯಮಟ್ಟದಲ್ಲಿ ವಿಶೇಷ ಪರಿಶೀಲನಾ ಸಮಿತಿಯನ್ನು ರಚಿಸಲು ಕೈಗೊಂಡ ಕ್ರಮವೇನು

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಯವರು):

ಅ) ಈ ಉದ್ದೇಶಕ್ಕಾಗಿ (ದಿವಂಗತ) ಶ್ರೀ ಕಡಪಟ್ಟಿಯವರ ಅಧ್ಯಕ್ಷತೆಯಲ್ಲಿ ಒಂದು ಶಾಸಕಾಂಗ ಸಮಿತಿಯನ್ನು ರಚಿಸಿತು.

ಆ) ಈ ಬಗ್ಗೆ ಸೂಕ್ತ ನಿರ್ದೇಶನಗಳನ್ನು ನೀಡಲಾಗಿದೆ.

ಇ) 'ಆ'ಗೆ ನೀಡಿದ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಜಾಪುರ ಜಿಲ್ಲೆಯ ಕೂಡಲಸಂಗಮ ಅಭಿವೃದ್ಧಿ ಹಾಗೂ ವಿಶ್ವನಾಥ್‌ರೆಡ್ಡಿ ಮುದ್ನಾಳ್‌ರವರು ಕೊಟ್ಟ ವರದಿಯನ್ನು ಅನುಷ್ಠಾನಕ್ಕೆ ತರುವ ವಿಷಯ

273 - ಶ್ರೀ ಶಿವಾನಂದ ಹೆಚ್ ಕೌಜಲಗಿ (ಬೈಲಹೊಂಗಲ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕೂಡಲ ಸಂಗಮದ ಅಭಿವೃದ್ಧಿ ಸಲುವಾಗಿ ಸರ್ಕಾರದವರು ಯಾವ ಯಾವ ಕಾರ್ಯಕ್ರಮ ಹಾಕಿಕೊಂಡಿರುವರು?

ಆ) ಇದಕ್ಕೆ ಮಾಸ್ಟರ್ ಪ್ಲಾನ್‌ನ್ನು ತಯಾರಿಸಲಾಗಿದೆಯೆ, ಇದರ ಅಭಿವೃದ್ಧಿಗೋಸ್ಕರ ಎಷ್ಟು ಹಣ ಬೇಕಾಗುವುದು?

ಇ) ಬಸವಣ್ಣನವರ ಧರ್ಮ ಪತ್ನಿಯಾದ ಗಂಗಾಬಿಕೆ ಇವಳ ಐಕ್ಯ ಸ್ಥಳವಾದ ಬೈಲಹೊಂಗಲ ತಾಲ್ಲೂಕಿನ ಮುಗುಟಖಾನ ಹುಬ್ಬಳ್ಳಿಯಲ್ಲಿ ಮಲಪ್ರಭಾನದಿಯ ದಂಡೆಯ ಮೇಲಿರುವ ಗುಡಿಯನ್ನು (ಸಮಾಧಿ) ಉಳಿಸುವ ಸಲುವಾಗಿ ಸರ್ಕಾರವು ಯಾವ ಕ್ರಮವನ್ನು ಕೈಗೊಂಡಿರುವುದು?

ಈ) ವಿಶ್ವನಾಥ್ ರೆಡ್ಡಿ ಮುದ್ನಾಳ್‌ರವರು ಕೊಟ್ಟ ಆಯೋಗದ ವರದಿಯನ್ನು ಅನುಷ್ಠಾನಕ್ಕೆ ತರಲು ಇಲ್ಲಿಯವರೆಗೆ ಸರ್ಕಾರದವರು ಯಾವ ಯಾವ ಕ್ರಮವನ್ನು ಕೈಗೊಂಡಿರುವರು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಕೂಡಲ ಸಂಗಮ ಕ್ಷೇತ್ರ ಮತ್ತು ಹೊಸ ಸಂಕೀರ್ಣದ ಅಭಿವೃದ್ಧಿ ಬಗ್ಗೆ ವಿಶ್ವನಾಥ ರೆಡ್ಡಿ ಮುದ್ನಾಳ ಸಮಿತಿಯ ಶಿಫಾರಸುಗಳನ್ನು ಸರ್ಕಾರವು ದಿನಾಂಕ 22.9.1988ರ ಆದೇಶದಲ್ಲಿ ಈಗಾಗಲೇ ಒಪ್ಪಿಕೊಂಡಿದ್ದು, ಅದರ ಮುಖ್ಯ ಶಿಫಾರಸ್ಸುಗಳು ಈ ಕೆಳಂಕಂಡಂತೆ ಇವೆ.

i) ಸಂಗಮೇಶ್ವರ ದೇವಾಲಯದ ಗರ್ಭಗುಡಿಯನ್ನು, ಮೂಲ ಲಿಂಗಕ್ಕೆ ಧಕ್ಕೆಯಾಗದಂತೆ, ಆಧುನಿಕ ತಂತ್ರಜ್ಞಾನದಿಂದ ಭದ್ರಪಡಿಸಬೇಕು.

ii) ಈಗಾಗಲೇ ಬಿಚ್ಚಲಾಗಿರುವ ದೇವಾಲಯದ ಪ್ರಾಕಾರವನ್ನು, ಅದೇ ಸ್ಥಳದಲ್ಲಿ ಮೊದಲಿನ ರೂಪದಲ್ಲೇ ತಾಂತ್ರಿಕ ಸುಧಾರಣೆಯೊಂದಿಗೆ ಪುನರ್ನಿರ್ಮಾಣ ಮಾಡಬೇಕು.

iii) ಅಂತರರಾಷ್ಟ್ರೀಯ ಬಸವ ಕೇಂದ್ರವನ್ನು ಸ್ಥಾಪಿಸಬೇಕು.

iv) ಉದ್ದೇಶಿತ ಸಂಕೀರ್ಣಕ್ಕಾಗಿ ಈಗಾಗಲೇ ವಶಪಡಿಸಿಕೊಳ್ಳಲಾಗಿರುವ 102 ಎಕರೆ ಭೂಮಿಯ ಜೊತೆಗೆ ಇನ್ನೂ 300 ಎಕರೆ ಭೂಮಿ ವಶಪಡಿಸಿಕೊಳ್ಳಬೇಕು.

v) ಕೂಡಲ ಸಂಗಮ ಕ್ಷೇತ್ರವನ್ನು ಅಂತರರಾಷ್ಟ್ರೀಯ ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಗೊಳಿಸಬೇಕು.

vi) ಸಂಕೀರ್ಣದಲ್ಲಿ, ಅಂತರ ರಾಷ್ಟ್ರೀಯ ಬಸವ ಸ್ಮಾರಕ, ಗ್ರಂಥಾಲಯ. ವಾಚನಾಲಯ, ಶ್ರವಣ - ದೃಶ್ಯ ವಿಭಾಗ, ವಚನ ಸಾಹಿತ್ಯ ಸಂಶೋಧನಾ ಕೇಂದ್ರ, ಆಡಳಿತ ಕಾರ್ಯಾಲಯ ಬಯಲು ರಂಗ ಮಂದಿರ, ಅನುಭವ ಮಂಟಪ, ಪ್ರವಾಸಿ ಗೃಹ, ಯಾತ್ರಿಕ ನಿಲಯ ಹಾಗೂ ಛತ್ರಗಳು, ಡಾರ್ಮಿಟರಿಗಳು ವಾಣಿಜ್ಯ ಸಂಕೀರ್ಣ, ಪ್ರಾರ್ಥನಾ ಮಂದಿರ, ಕಾಯಕ ಕೇಂದ್ರ, ಕಿರು ವಿಮಾನ ನಿಲ್ದಾಣ, ಚಿಕಿತ್ಸಾಲಯ, ಶಾಲೆಗಳು ಯೋಗಮಂದಿರ ಪ್ರಕಟಣಾ ವಿಭಾಗ, ಸುರಕ್ಷಿತ ಕುಡಿಯುವ ನೀರು ಸರಬರಾಜು, ಶೌಚಾಲಯ, ಸ್ನಾನ ಗೃಹಗಳು, ಮತ್ತು ಸೂಕ್ತ ಒಳಚರಂಡಿ ವ್ಯವಸ್ಥೆ. ಇವುಗಳನ್ನು ಒದಗಿಸಬೇಕು.

ಆ) ಸಂಗಮ ಸಂಕೀರ್ಣದ ನೀಲಿ ನಕಾಶೆಗೆ ಸರ್ಕಾರವು ದಿನಾಂಕ 19.7.1989ರ ಆದೇಶದಲ್ಲಿ ಈಗಾಗಲೇ ಅನುಮೋದನೆ ನೀಡಿದೆ. ಸಂಕೀರ್ಣದ ಅಭಿವೃದ್ಧಿಯ ಅಂದಾಜು ವೆಚ್ಚ 1988-89ರ ದರಗಳ ಮೇರೆಗೆ ಸುಮಾರು 13.82 ಕೋಟಿ ರೂ. ಗಳಾಗುತ್ತದೆ.

ಇ) ಈ ವಿಷಯವು ವಿಶ್ವನಾಥ ರೆಡ್ಡಿ ಮುದ್ನಾಳ್ ಸಮಿತಿಯ ವರದಿಯಲ್ಲಿ ಚರ್ಚಿಸಲ್ಪಟ್ಟಿಲ್ಲ, ಮತ್ತು ಇದರ ಬಗ್ಗೆ ಸರ್ಕಾರದ ಮುಂದೆ ಸದ್ಯಕ್ಕೆ ಯಾವ ಪ್ರಸ್ತಾವನೆಯೂ ಇರುವುದಿಲ್ಲ.

ಈ)

i) ಸಂಗಮೇಶ್ವರ ದೇವಾಲಯದ ಬುನಾದಿಯನ್ನು ಭದ್ರಗೊಳಿಸಲು ಮತ್ತು ಪ್ರಾಕಾರವನ್ನು ಪುನರ್ರಚಿಸಲು ರೂಕ್ರಿಯ ಕೇಂದ್ರೀಯ ಕಟ್ಟಡ ಸಂಶೋಧನಾ ಸಂಸ್ಥೆಯು ಕೆಲವು ಶಿಫಾರಸ್ಸುಗಳನ್ನು ಮಾಡಿದ್ದು, ಅವು ಪರಿಶೀಲನೆಯಲ್ಲಿವೆ.

ii) ಸಂಕೀರ್ಣದ ಕಟ್ಟಡಗಳ ನಕ್ಷೆಗಳನ್ನು ತಯಾರಿಸಲು ಮುಖ್ಯ ವಾಸ್ತು ಶಿಲ್ಪಿಯವರಿಗೆ ವಹಿಸಲಾಗಿದೆ.

iii) ಸಂಕೀರ್ಣದ ಅಭಿವೃದ್ಧಿಗೆ ಬೇಕಾದ ಉಳಿದ ಜಮೀನುಗಳನ್ನು ಭೂಸ್ವಾಧೀನ ಕಾಯಿದೆಯ ಪ್ರಕಾರ ಈಗಾಗಲೇ ನೋಟೀಫಿಕೇಶನ್ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯದಲ್ಲಿ ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸುವ ಬಗ್ಗೆ ಕುರಿತು

280 - ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?